ಅಭಿರುಚಿಹೀನರಾಗುವುದು ಒಂದು ಸಾಹಿತ್ಯ ಸಂಸ್ಕೃತಿಯಲ್ಲಿ ಅದೆಷ್ಟು ಅಪಾಯಕಾರಿಯಾದದ್ದು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಈ ಕುಸಿತ ನನ್ನೊಳಗೆ ಆತಂಕ ಸೃಷ್ಟಿಸಿದೆ. ಇದರರ್ಥ ಎಲ್ಲರೂ ಹೀಗೇ ಇದ್ದಾರಂತಲ್ಲ. ಆದರೆ ಒಳ್ಳೆಯ ಪ್ರಾಧ್ಯಾಪಕರ ಸಂಖ್ಯೆ ತೀರಾ ಕಡಿಮೆ. ಅಲ್ಲದೆ, ಈ ವಿಮರ್ಶೆಯನ್ನು ನಾವು ಬೇರೆಯವರಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ಸೃಜನಶೀಲತೆಯ ಇತರ ಪ್ರಕಾರಗಳಲ್ಲಿ ಎಲ್ಲರಿಗೂ ಪ್ರವೇಶವಿದೆ. ಅಂದರೆ ಕವಿತೆ, ನಾಟಕ, ಕತೆ, ಕಾದಂಬರಿ, ಪ್ರಬಂಧ ಇತ್ಯಾದಿ. ಆದರೆ ವಿಮರ್ಶೆ ಮಾತ್ರ ಸಾಹಿತ್ಯ ವಿಭಾಗದವರು ಶ್ರದ್ಧೆಯಿಂದ ಮಾಡಬೇಕಾದ ಕೆಲಸ. ಪರಂಪರೆಯ ಅರಿವು, ಹಲವು ವಿಮರ್ಶಾ ಮಾರ್ಗಗಳ ತಿಳಿವಳಿಕೆ, ಭಾಷಾಶಾಸ್ತ್ರ, ಕಾವ್ಯಮೀಮಾಂಸೆ, ಸೌಂದರ್ಯಶಾಸ್ತ್ರ, ತತ್ವಶಾಸ್ತ್ರ ಅಂತರ್‌ಪಠ್ಯೀಯತೆ ಹೀಗೆ ಹಲವು ತಿಳಿವಳಿಕೆಗಳಿಂದ ಮೂಡುವ ವಿವೇಕವಿದು. ಜೊತೆಗೆ ಆಯಾ ವಿಮರ್ಶಕರ ಇಂಟ್ಯೂಶನ್. ಇದೆಲ್ಲದರಿಂದ ಅಳೆದು ತೂಗಿ ಕೃತಿಯ ಅನುಭವವನ್ನು ಕಾಣುವ, ಕಾಣಿಸುವ ಕೆಲಸವಿದು. ಅವಸರದ ತೀರ್ಮಾನಗಳನ್ನೇ ವಿಮರ್ಶೆಯೆಂದರೆ ಹೇಗೆ? ವಿದ್ಯಾರ್ಥಿಗಳನ್ನು ಈ ದಿಕ್ಕಿನಲ್ಲಿ ರೂಪಿಸುವ ಕೆಲಸಗಳಾಗುತ್ತಿವೆಯೆ? ಹಿಂದಿಯಲ್ಲಿ ಮುಖ್ಯ ಕೃತಿಗಳು ಬರುತ್ತಿದ್ದರೂ ವಿಮರ್ಶೆ ಮಾತ್ರ ಬಡಕಲಾಗಿದೆ. ಅಧ್ಯಾಪಕರ ಆಯ್ಕೆಗಳಲ್ಲಿನ ಅಸೂಕ್ಷ್ಮತೆ, ಪಠ್ಯರಚನೆಯ ಅಸಾಹಿತ್ಯಿಕ ಹಿತಾಸಕ್ತಿಗಳು, ವಿಶ್ವವಿದ್ಯಾಲಯದ ಗುಂಪುಗಾರಿಕೆಗಳು ಹಿಂದಿ ವಿಮರ್ಶೆಯನ್ನು ಇಂಥ ಅವಸಾನಕ್ಕೆ ತಂದು ನಿಲ್ಲಿಸಿವೆ.

**◆ ಸಮಕಾಲೀನ ಹಿಂದಿ ಸಾಹಿತ್ಯ ವಿಮರ್ಶೆಯ ಒಟ್ಟು ವಾತಾವರಣದ ಮೇಲೂ ಇದರ ಕೆಟ್ಟ ಪ್ರಭಾವ ಆಗಿರಬೇಕಲ್ಲವೆ? ಹಾಗಾದರೆ ಇನ್ನುಮುಂದೆ ಹಿಂದಿ ಸಾಹಿತ್ಯ ವಿಮರ್ಶೆಯ ಎದುರಿರುವ ಸವಾಲುಗಳನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?**

ಗಂಭೀರವಾದ ತಾತ್ವಿಕ ಜಿಜ್ಞಾಸೆಗಳನ್ನು ಕಳೆದುಕೊಂಡಿರುವುದೇ ಈ ಹೊತ್ತಿನ ದೊಡ್ಡ ಸಮಸ್ಯೆ. ಪರಸ್ಪರ ವಕಾಲತ್ತು ವಹಿಸುವ ಗುಂಪು ವಿಮರ್ಶೆಗಳು ಇನ್ನೊಂದು ತೊಡಕು. ಆಮೇಲೆ ಬಹುತೇಕರು 'ಆರತಿ ವಿಮರ್ಶೆ' ಬಯಸುವಂಥವರೇ. ಅಂದ್ರೆ ಆರತಿ ಮಾಡುತ್ತಾರಲ್ಲ, ಆ ತರಹ. ನನ್ನ ಆರತಿ ನೀನು ಮಾಡು, ನಿನ್ನ ಆರತಿ ನಾನು ಮಾಡುವೆ ಅನ್ನೋ ತರಹ ಇರುತ್ತದೆ. ಇದು ವಿಮರ್ಶೆಯ ಕ್ರೆಡಿಬಿಲಿಟಿಯ ಪ್ರಶ್ನೆ. ಇಂಥದ್ದೊಂದು ಹತ್ತು ಮಂದಿ ಸಾಹಿತ್ಯಲೋಕದಲ್ಲಿ ಇದ್ದರೆ ಇದನ್ನೆಲ್ಲ ಸರಿಪಡಿಸಲು ಮತ್ತೆ ದಶಕಗಳೇ ಬೇಕು. ಯಾವುದೇ ಭಾಷೆಯ ವಿಮರ್ಶಕರು ಕೇವಲ ತಮ್ಮ ಭಾಷೆಯ ಸಾಹಿತ್ಯ ಪರಂಪರೆಯನ್ನು ಓದಿಕೊಂಡು ಮಹತ್ವದ ವಿಮರ್ಶೆ ಮಾಡಲು ಸಾಧ್ಯವಿಲ್ಲ. ನಮ್ಮ ಪರಂಪರೆಯನ್ನು ಮಾತ್ರ ಓದಿಕೊಂಡು ವಿಮರ್ಶೆಗೆ ತೊಡಗಿದರೆ ನಾವು ಹಳೆಯ ವಿಮರ್ಶಕರನ್ನೇ ಪುನರುಚ್ಚರಿಸುತ್ತಿರುತ್ತೇವೆ. ಹಿಂದಿ ಜಗತ್ತಿನ ಹೊರಗೆ ಏನು ನಡೆದಿದೆ ಎಂಬುದನ್ನು ತಿಳಿಯದಿದ್ದರೆ, ನಮ್ಮ ವಾಹನ ನಿಂತಲ್ಲಿಯೇ ನಿಂತಿರುತ್ತದೆ.

ಹಿಂದಿ ಸಾಹಿತ್ಯವೂ ಪುರುಷಕೇಂದ್ರಿತವಾಗಿದೆ, ಹಿಂದಿ ವಿಮರ್ಶೆಯೂ ಪುರುಷಕೇಂದ್ರಿತವಾಗಿದೆ.

